ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಸಿ7[4]ಪ್ರಾಶಿಅ:1–5 ಆಂ.ಮಾ.ಪ.ನೋ(ಮೈಸೂರು)01/2015–16 ದಿನಾಂಕ: 18–11–2016

## ನಮೂನೆ–4

[ನಿಯಮ–7ರ ಉಪನಿಯಮ–3ರಂತೆ]

**ಪರಿಷ್ಕರಿಸಲ್ಪಟ್ಟ ನೋಂದಣಿ ಪ್ರಮಾಣ ಪತ್ರ**

**ಪ್ರಮಾಣ ಪತ್ರ ಸಂಖ್ಯೆ: 372/2016–17**

***ಸೇಂಟ್ ಮೇರಿಸ್ ಎಜುಕೇಷನ್ ಟ್ರಸ್ಟ್(ರಿ), ಟಿ.ನರಸೀಪುರ, ಮೈಸೂರು*** ಈ ಸಂಸ್ಥೆಯು ಕೆಳಕಂಡ ಶಾಲೆಯನ್ನು ನಡೆಸಲು ನೋಂದಾಯಿಸಲ್ಪಟ್ಟಿದೆ.

| ಕ್ರ. ಸಂ | ಶಾಲೆಯ ಹೆಸರು ಮತ್ತು ವಿಳಾಸ [ಸಂಸ್ಥೆಯ ವರ್ಗ] | ಅನುಮತಿ ನೀಡಿದ ತರಗತಿ | ಪ್ರಾರಂಭಿಸಿದ ವರ್ಷ | ಅನುಮತಿ ನೀಡಿದ ಮಾಧ್ಯಮ | ಪಾವತಿಸಿರುವ ಶುಲ್ಕ |
|---|---|---|---|---|---|
| 01. | ಸೇಂಟ್ ಮೇರಿಸ್ ಸ್ಕೂಲ್, ವಿವೇಕಾನಂದನಗರ, ಟಿ.ನರಸೀಪುರ, ಮೈಸೂರು ಜಿಲ್ಲೆ. | 1 ರಿಂದ 4ನೇ ತರಗತಿ ಕನ್ನಡ ಮಾಧ್ಯಮ | 1999–2000 | 1 ರಿಂದ 4ನೇ ತರಗತಿ ಕನ್ನಡ ಮಾಧ್ಯಮ [ಶಾಶ್ವತ ಅನುದಾನ ರಹಿತ] | ------ |

ಮೇಲಿನ ಆಡಳಿತ ಮಂಡಳಿಯು, ಕರ್ನಾಟಕ ಶಿಕ್ಷಣ ಕಾಯಿದೆ–1983ರ [1995ರ ಕರ್ನಾಟಕ ಕಾಯಿದೆ–1] ಸೆಕ್ಷನ್–31ರ ಉಪ ನಿಯಮ [5]ರಲ್ಲಿನ ಅವಕಾಶಗಳಂತೆ, ಈ ಮೊದಲು ನೋಂದಣಿ ಮಾಡಿದ ಶಾಲೆಯ ವಿವರಗಳಲ್ಲಿ ಬದಲಾವಣೆಗಳಾಗಿರುವುದನ್ನು ವರದಿ ಮಾಡಿ, ಮೂಲ ನೋಂದಣಿ ಪ್ರಮಾಣ ಪತ್ರವನ್ನು ಪರಿಷ್ಕರಿಸುವಂತೆ ಕೋರಿ ನಮೂನೆ–3ರಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತದೆ.

ಪ್ರಯುಕ್ತ, ಈ ಮೊದಲು *ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇ, ಟಿ.ನರಸೀಪುರ, ಮೈಸೂರು ಜಿಲ್ಲೆ* ಈ ಪ್ರಾಧಿಕಾರದಿಂದ ವಿತರಿಸಲಾಗಿದ್ದ *13 ನೇ* ಕ್ರಮ ಸಂಖ್ಯೆಯ ಹಾಗೂ *ದಿನಾಂಕ: 05–04–1999* ರ ನೋಂದಣಿ ಪ್ರಮಾಣ ಪತ್ರವನ್ನು ಹಿಂಪಡೆದಿದೆ ಮತ್ತು ರದ್ದುಪಡಿಸಿದೆ ಹಾಗೂ ಸಂಬಂಧಿತ ವಹಿಯಲ್ಲಿ ಅಗತ್ಯ ನಮೂದುಗಳನ್ನು ಮಾಡುವಂತೆ ಆ ಮೂಲ ನೋಂದಣಿ ಪ್ರಾಧಿಕಾರಿಗೆ ಸೂಚಿಸಿದೆ.

ಹಾಗೂ, ಇದೀಗ ಪರಿಷ್ಕೃತ ನೋಂದಣಿ ಪ್ರಮಾಣ ಪತ್ರವನ್ನು ***ಸೇಂಟ್ ಮೇರಿಸ್ ಎಜುಕೇಷನ್ ಟ್ರಸ್ಟ್(ರಿ), ಟಿ.ನರಸೀಪುರ, ಮೈಸೂರು*** ಇವರ ಹೆಸರಿಗೆ ಕೆಳಕಂಡಂತೆ ಪರಿಷ್ಕೃತ ವಿವರಗಳನ್ನು ನಮೂದಿಸಿ ವಿತರಿಸಲಾಗಿದೆ.

| ಕ್ರ. ಸಂ | ಶಾಲೆಯ ಹೆಸರು ಮತ್ತು ವಿಳಾಸ ಮತ್ತು ವರ್ಗ | ಅನುಮತಿ ನೀಡಿದ ತರಗತಿ | ಶೈಕ್ಷಣಿಕ ಸಾಲು | ಅನುಮತಿ ನೀಡಿದ ಮಾಧ್ಯಮ | ಪಾವತಿಸಿರುವ ಶುಲ್ಕ |
|---|---|---|---|---|---|
| 01. | ಸೇಂಟ್ ಮೇರಿಸ್ ಸ್ಕೂಲ್, ವಿವೇಕಾನಂದನಗರ, ಟಿ.ನರಸೀಪುರ, ಮೈಸೂರು ಜಿಲ್ಲೆ. | 1 ರಿಂದ 4ನೇ ತರಗತಿ ಆಂಗ್ಲ ಮಾಧ್ಯಮ | 2015–2016 | 1 ರಿಂದ 4ನೇ ತರಗತಿ ಆಂಗ್ಲ ಮಾಧ್ಯಮ [ಶಾಶ್ವತ ಅನುದಾನ ರಹಿತ] | -- |

ಈ ಹಿಂದಿನ ಪ್ಯಾರಾಗಳಲ್ಲಿ ಉಲ್ಲೇಖಿಸಿರುವ ಆಡಳಿತ ಮಂಡಳಿಯ ವಿವರಗಳನ್ನು, ಶಿಕ್ಷಣ ಸಂಸ್ಥೆಗಳ ಪರಿಷ್ಕೃತ ನೋಂದಣಿ ಪ್ರಮಾಣ ಪತ್ರವನ್ನು ವಿತರಿಸಲಾಗಿರುವ ನೋಂದಣಿ ವಹಿಯ ***01ನೇ ವಾಲ್ಯೂಂನ, ಪುಟ ಸಂಖ್ಯೆ: 237 ರ ಕ್ರಮ ಸಂಖ್ಯೆ: 372 ರಲ್ಲಿ*** ನೋಂದಾಯಿಸಲಾಗಿದೆ.

ಈ ನೋಂದಣಿ ಪ್ರಮಾಣ ಪತ್ರವನ್ನು *ದಿನಾಂಕ: 18–11–2016* ರಂದು ವಿತರಿಸಲಾಗಿದೆ, ನೋಂದಣಿಯು ಕರ್ನಾಟಕ ಶಿಕ್ಷಣ ಕಾಯ್ದೆ ನಿಯಮಗಳು ಹಾಗೂ ಕಾಲದಿಂದ ಕಾಲಕ್ಕೆ ಹೊರಡಿಸಲಾಗುವ ಇಲಾಖಾ ನಿಯಮಗಳಿಗೆ ಒಳಪಟ್ಟಿದೆ.

*ಮಾನ್ಯ ಆಯುಕ್ತರ ಆದೇಶದ ಮೇರೆಗೆ*

[ಕೆ.ಆನಂದ]

*ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)*

*ಹಾಗೂ ನೋಂದಣಿ ಪ್ರಾಧಿಕಾರಿಗಳ ಪರವಾಗಿ*

ಸ್ಥಳ : ಬೆಂಗಳೂರು.

ದಿನಾಂಕ : 18–11–2016.

St. Mary's Education Trust

Chairman

**ಪ್ರತಿಯನ್ನು.**

*01.* ಉಪನಿರ್ದೇಶಕರು [ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.

*02.* ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಟಿ.ನರಸೀಪುರ ತಾಲ್ಲೂಕು, ಟಿ.ನರಸೀಪುರ.

*03.* ಕಾರ್ಯದರ್ಶಿಗಳು, ಸೇಂಟ್ ಮೇರಿಸ್ ಸ್ಕೂಲ್, ವಿವೇಕಾನಂದನಗರ, ಟಿ.ನರಸೀಪುರ, ಮೈಸೂರು.

*04.* ಕಛೇರಿ ಪ್ರತಿ.

Principal
ST. MARY'S ENGLISH SCHOOL
T. Narasipura, Mysore-571 124

# ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ
ಸಾರ್ವಜನಿಕ ಶಿಕ್ಷಣ ಇಲಾಖೆ
ನೃಪತುಂಗ ರಸ್ತೆ,
ಬೆಂಗಳೂರು – 560 001.

## ನಮೂನೆ – 2

(ನಿಯಮ 3ರ ಉಪ ನಿಯಮ 5(ಬಿ)

ಪ್ರಮಾಣ ಪತ್ರ ಸಂಖ್ಯೆ: 13 : 99 – 2000
ಸೆಂಟ್ ಮೇರೀಸ್ ಎಜುಕೇಶನ್ ಟ್ರಸ್ಟ್,

ವಿವೇಕಾನಂದ ನಗರ, ಟಿ.ನರಸೀಪುರ, ಮೈಸೂರು ಜಿಲ್ಲೆ.

ಇದರ ಗೌರ್ವನಿಂಗ್ ಕೌನ್ಸಿಲ್‌ಗೆ ಕರ್ನಾಟಕ ಶಿಕ್ಷಣ ಕಾಯ್ದೆ,1983 (ಕರ್ನಾಟಕ ಆ್ಯಕ್ಟ್ 1 ಆಫ್1995) ಸೆಕ್ಷನ್ 31 ರಂತೆ 26 ನೇ ಏಪ್ರಿಲ್ ತಿಂಗಳ ಒಂದು ಸಾವಿರದ ಒಂಬೈನೂರ ತೊಂಭತ್ತೊಂಭತ್ತರಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ನಡೆಸಲು ನೊಂದಾಯಿಸಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.

1. ಕ್ರಮ ಸಂಖ್ಯೆ : 13: 99 – 2000
2. ಶಾಲೆಯ ಹೆಸರು ಮತ್ತು ಪೂರ್ಣ ವಿಳಾಸ. : ಸೆಂಟ್ ಮೇರೀಸ್ ಪ್ರಾಥಮಿಕ ಶಾಲೆ, ವಿವೇಕಾನಂದ ನಗರ, ಟಿ. ನರಸೀಪುರ, ಮೈಸೂರು ಜಿಲ್ಲೆ.
3. ಅನುಮತಿ ನೀಡಿದ ತರಗತಿಗಳು : 5 ರಿಂದ 7
4. ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ : 1999 – 2000
5. ಅನುಮತಿ ನೀಡಿದ ಮಾಧ್ಯಮ : ಆಂಗ್ಲ
6. ಶುಲ್ಕ ಪಾವತಿ ಮಾಡಿರುವುದು : ರೂ.10,000–00

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮಸಂಖ್ಯೆ 13, ಪುಟ ಸಂಖ್ಯೆ 7, ವಾಲ್ಯೂಂ ಸಂಖ್ಯೆ 2ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ.

## ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತುಗೊಳಪಟ್ಟು ನೀಡಲಾಗಿದೆ.

1. ಈ ನೋಂದಾವಣೆಯು ನಿಯಮ 3ರ(4) ಮತ್ತು(5) ಕ್ಕೆ ಒಳಪಟ್ಟಿರುತ್ತದೆ.

2. ಗೌರ್ವನಿಂಗ್ ಕೌನ್ಸಿಲ್‌ರವರು ನಿಯಮ 4(4) ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

3. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪಾಠೋಪಕರಣಗಳು, ಪೀಠೋಪಕರಣಗಳು, ಸಿಬ್ಬಂದಿ ವರ್ಗ, ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

4. ಈ ಶಿಕ್ಷಣ ಸಂಸ್ಥೆಗೆ ___ಆಂಗ್ಲ___ ಮಾಧ್ಯಮ ಪ್ರಾಥಮಿಕ ಶಾಲೆಯನ್ನು ತೆರೆಯಲು ನೊಂದಾಯಿಸುವ ವಿಚಾರವನ್ನು ಸರ್ಕಾರಿ ಆದೇಶ ಸಂಖ್ಯೆ : ಇಡಿ 14 ಎಸ್ ಇ ಎಸ್ 98, ದಿನಾಂಕ : 17–03–1999 ರನ್ವಯ ಪರಿಶೀಲಿಸಲಾಗಿದೆ.

   ___ಮೈಸೂರು___ ಉಪ ನಿರ್ದೇಶಕರ ವರದಿಯನ್ವಯ ಈ ಸಂಸ್ಥೆಯು ಶಾಲೆಯನ್ನು ತೆರೆಯಲು ಉದ್ದೇಶಿಸಿರುವ ಸ್ಥಳದಲ್ಲಿ 2 ಕಿ.ಮೀ. ವಿಸ್ತೀರ್ಣದೊಳಗಿನ ಪ್ರದೇಶದಲ್ಲಿ ___1___ ಸರ್ಕಾರಿ ಪ್ರಾಥಮಿಕ ಶಾಲೆಗಳು, ___2___ ಖಾಸಗಿ ಅನುದಾನಿತ, ಅನುದಾನರಹಿತ ಪ್ರಾಥಮಿಕ ಶಾಲೆಗಳು ಈಗ ಅಸ್ತಿತ್ವದಲ್ಲಿರುತ್ತವೆ. ಹಾಗೂ ಈ ಶಾಲೆಗಳು ಸದರಿ ಪ್ರದೇಶದ ಶೈಕ್ಷಣಿಕ ಅಗತ್ಯತೆಯನ್ನು ಪೂರೈಸಿರುವುದನ್ನು ಮನಗಾಣಲಾಗಿದೆ. ಅದಾಗ್ಯೂ ಸರ್ವೋಚ್ಚ ನ್ಯಾಯಾಲಯವು ಉನ್ನಿ ಕೃಷ್ಣನ್ ಪ್ರಕರಣದಲ್ಲಿ 14 ವರ್ಷಗಳ ವಯೋಮಿತಿಯೊಳಗಿನ ಮಕ್ಕಳಿಗೆ ಉಚಿತ ಶಿಕ್ಷಣದ ಸಂವಿಧಾನಾತ್ಮಕ ಹಕ್ಕನ್ನು ಎತ್ತಿಹಿಡಿದು, ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸುವ ರಾಜ್ಯ ಸರ್ಕಾರದ ಜವಾಬ್ದಾರಿಯನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸಹ ಒದಗಿಸಬಹುದೆಂದು ಹಾಗೂ ರಾಜ್ಯ ಸರ್ಕಾರವು ನಡೆಸುವ ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸಲು ಇಚ್ಛಿಸದೇ ಇರುವ ಪೋಷಕರ, ಮಕ್ಕಳ ಶೈಕ್ಷಣಿಕ ಅಗತ್ಯತೆಯನ್ನು ಇಂತಹ ಖಾಸಗಿ ಶಿಕ್ಷಣ ಸಂಸ್ಥೆಗಳು ಪೂರೈಸುತ್ತವೆಯೆಂಬ ಅಂಶವನ್ನು ಎತ್ತಿ ಹಿಡಿದಿದೆ. ಈ ಸ್ಥಳದಲ್ಲಿ ಮತ್ತೊಂದು ಪ್ರಾಥಮಿಕ ಶಾಲೆಯ ಅಗತ್ಯತೆಯು ಇಲ್ಲದಿದ್ದರೂ ಸರ್ಕಾರಿ ಅಥವಾ ಅನುದಾನಿತ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಇಚ್ಛಿಸದೇ ಇರುವ ಪೋಷಕರ / ಮಕ್ಕಳ ಶೈಕ್ಷಣಿಕ ಅಗತ್ಯತೆಯನ್ನು ಪೂರೈಸಲು ಮತ್ತು ಪೋಷಕರಿಗೆ / ಮಕ್ಕಳಿಗೆ ಹೆಚ್ಚಿನ ಆಯ್ಕೆ ಸ್ವಾತಂತ್ರ್ಯ ನೀಡುವ ಉದ್ದೇಶದಿಂದಲೂ ಹಾಗೂ ಸದರಿ ಶಿಕ್ಷಣ ಸಂಸ್ಥೆಯು ಸ್ವಯಂ ಪ್ರೇರಣೆಯಿಂದ ಸದರಿ ಸ್ಥಳದಲ್ಲಿ ಮತ್ತೊಂದು ಶಾಲೆಯನ್ನು ಶಾಶ್ವತ ಅನುದಾನ ರಹಿತ ಷರತ್ತಿನ ಮೇಲೆ ತೆರೆಯಲು ಇಚ್ಛಿಸಿರುವುದರಿಂದ, ಸದರಿ ಶಾಲೆಯನ್ನು ಮೇಲ್ದರ್ಜೆಗೇರಿಸಿ ನೊಂದಾಯಿಸಲಾಗಿದೆ.

5. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.

6. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

7. ಯಾವ ಆಡಳಿತ ಮಂಡಳಿಗೆ ಶಾಲೆಯನ್ನು ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ಶಾಲೆಯನ್ನು ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಸ್ತಾಂತರಕ್ಕೆ ಅವಕಾಶವಿರುವುದಿಲ್ಲ.

8. ಸರ್ಕಾರಿ ಆದೇಶ ಸಂಖ್ಯೆ : ಇಡಿ 28 ಪಿಜಿಸಿ 94, ದಿನಾಂಕ : 29–4–94 ರಂತೆ 1 ರಿಂದ 4ನೇ ತರಗತಿಯವರೆಗೆ ಕನ್ನಡ ಅಥವಾ ಮಕ್ಕಳ ಮಾತೃಭಾಷಾ ಮಾಧ್ಯಮದಲ್ಲಿ ನಡೆಸಿ ಭಾಷಾ ನೀತಿ ಪಾಲಿಸುತ್ತಿರುವ ಶಾಲೆಗಳಿಗೆ 5ನೇ ತರಗತಿಯಿಂದ ಆಂಗ್ಲಮಾಧ್ಯಮಕ್ಕೆ ಮೇಲ್ದರ್ಜೆಗೇರಿಸಿ ನೊಂದಾಯಿಸಲಾಗಿದೆ. ಭಾಷಾ ನೀತಿಯ ಷರತ್ತಿಗೆ ಒಳಪಟ್ಟು ನೊಂದಣಿಯಾಗಿರುವ ಶಾಲೆಗಳಲ್ಲಿ ಭಾಷಾ ನೀತಿಯನ್ನು ಉಲ್ಲಂಘಿಸಿರುವುದು ಸರ್ಕಾರದ : ಇಲಾಖೆಯ : ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ಬಂದಲ್ಲಿ ನಿಯಮಗಳನ್ವಯ ಸದರಿ ಶಾಲೆಯ ನೊಂದಣಿಯನ್ನು ರದ್ದು ಪಡಿಸಲಾಗುವುದು.

9. ಪ್ರತಿ ವರ್ಷವೂ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

10. ಕರ್ನಾಟಕ ಸಮಗ್ರ ಶಿಕ್ಷಣ ಮಸೂದೆ, 1983 (ಕರ್ನಾಟಕ ಆಕ್ಟ್ 1 ಆಫ್ 1995) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಹಾಗೂ ರಚಿಸಲಾದ ಮತ್ತು ಆಗಿಂದಾಗ್ಗೆ ರಚಿಸಲಾಗುವ ನಿಯಮಗಳ ಸಂಬಂಧದಡಿಯಲ್ಲಿ ಮತ್ತು ಪ್ರಾಧಿಕಾರ ನೀಡುವ ಎಲ್ಲಾ ಷರತ್ತುಗಳನ್ನು ಹಾಗೂ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

11. ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಶಾಲೆಗಳಿಗೆ ಸಂಬಂಧಿಸಿದಂತೆ ನೊಂದಣಿಯಾಗಿರುವ ಶಾಲೆಗಳೆಲ್ಲವೂ ಸರ್ಕಾರಿ ಅಧಿಸೂಚನೆ ಸಂಖ್ಯೆ : ಇಡಿ 175 ಪಿ ಎಂ ಸಿ 95, ದಿನಾಂಕ : 7–9–98 ಮತ್ತು ಇಡಿ 175 ಪಿ ಎಂ ಸಿ 97 ದಿನಾಂಕ : 29 –12–1998 ರಂತೆ **ಶಾಶ್ವತ ಅನುದಾನ ರಹಿತ ಶಾಲೆಗಳೆಂಬುದಾಗಿ ಪರಿಗಣಿಸಿದೆ.**

12. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳು (ಶಿಸ್ತು ಮತ್ತು ನಿಯಂತ್ರಣ) ನಿಯಮ 1978 ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

13. ಶಾಲೆಯು ಪ್ರಾರಂಭಿಸಿದ 2 ತಿಂಗಳ ಅವಧಿಯೊಳಗೆ ಪ್ರಥಮ ಮಾನ್ಯತೆಗೆ ಸಂಬಂಧಿಸಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಜಿಲ್ಲಾ ಉಪ ನಿರ್ದೇಶಕರಿಗೆ ಅರ್ಜಿಯನ್ನು ಸಲ್ಲಿಸ ತಕ್ಕದ್ದು. ನಂತರ ಪ್ರತಿ 3 ವರ್ಷಗಳಿಗೊಮ್ಮೆ ಮಾನ್ಯತೆಯನ್ನು ನವೀಕರಿಸಿಕೊಳ್ಳತಕ್ಕದ್ದು.

14. ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಪಾಲಿಸತಕ್ಕದ್ದು.

15. ತರಬೇತಿ ಹೊಂದಿದ ಹಾಗೂ ಇಲಾಖಾ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಮಾತ್ರ

16. ಕರ್ನಾಟಕ ಶಿಕ್ಷಣ ಮಸೂದೆಯ ಅನುಚ್ಛೇದ 6ರ ಆಡಿಯಲ್ಲಿ ಉಪಬಂಧ 36 ರಿಂದ 39ರಂತೆ ನೊಂದಣಿ ಮಾಡಿದ ಎಲ್ಲಾ ಶಾಲೆಗಳು **'ರೆಕಗ್ನಿಷನ್'** ಹಾಗೂ **'ಪ್ರಾವಿಷನಲ್ ರೆಕಗ್ನಿಷನ್'** ವ್ಯಾಪ್ತಿಗೆ ಬರುವುದು.

17. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಜಿಲ್ಲಾ ಉಪ ನಿರ್ದೇಶಕರ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.

18. ಕರ್ನಾಟಕ ಶಿಕ್ಷಣ ಮಸೂದೆ, 1983ರ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪಾಠೋಪಕರಣ, ಪೀಠೋಪಕರಣ, ಗ್ರಂಥಾಲಯದ ಪುಸ್ತಕಗಳು, ಆಟದ ಮೈದಾನ, ಶಾಲಾ ಕಟ್ಟಡ ಮುಂತಾದ ಅಗತ್ಯ ಸೌಲಭ್ಯಗಳನ್ನು ಒಂದು ವರ್ಷದೊಳಗೆ ಒದಗಿಸತಕ್ಕದ್ದು. ಇಲ್ಲದಿದ್ದಲ್ಲಿ ನೊಂದಣಿಯನ್ನು ರದ್ದುಗೊಳಿಸಲಾಗುವುದು.

19. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೊಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ 2 ತಿಂಗಳೊಳಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಪ್ಪದೇ ತಿಳಿಸತಕ್ಕದ್ದು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ರದ್ದಾಗುವುದು.

ದಿನಾಂಕ: 26-04-1999

ನಿರ್ದೇಶಕರು
(ಪ್ರಾಥಮಿಕ ಶಿಕ್ಷಣ)
ಮತ್ತು ನೊಂದಣಿ ಪ್ರಾಧಿಕಾರ

St. Mary's Education Trust
Chairman

Principal
ST. MARY'S ENGLISH SCHOOL
T. Narasipura, Mysore-571 124

by Reg. post

ಆಯುಕ್ತರ ಕಛೇರಿ,
ಸಾರ್ವಜನಿಕ ಶಿಕ್ಷಣ ಇಲಾಖೆ,
"[illegible] ಸಾರ್ವಜನಿಕ ಕಛೇರಿಗಳು"
ಕೃಷ್ಣರಾಜೇಂದ್ರ ವೃತ್ತ,
ನೃಪತುಂಗ ರಸ್ತೆ,
ಬೆಂಗಳೂರು-560001.

## ಕರ್ನಾಟಕ ಸರ್ಕಾರ

ನಮೂನೆ-2
(ನಿಯಮ 3 ಮತ್ತು ನಿಯಮ 5(ಬಿ) )

ಪ್ರಮಾಣ ಪತ್ರ ಸಂಖ್ಯೆ :- 337

.....ಸೆಂಟ್‌ಮೇರಿಸ್ ಎಜುಕೇಷನ್ ಟ್ರಸ್ಟ್(ರಿ), ಕಾಲೇಜು ರಸ್ತೆ,..........
.... .....ಟಿ.ನರಸೀಪುರ-571124..........

ಗವರ್ನಿಂಗ್ ಕೌನ್ಸಿಲನ್ನು ಕರ್ನಾಟಕ ಶಿಕ್ಷಣ ಕಾಯಿದೆ 1983(ಕರ್ನಾಟಕ ಆಕ್ಟ್ 1 — 1995) ಸೆಕ್ಷನ್ 31ರಂತೆ ಈ ದಿನ ..11ನೇ.ಮೇ..... ಸಾವಿರದ ಒಂಭೈನೂರ ತೊಂಭತೊಂಭತ್ತು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ನಡೆಸಲು ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| 1. ಕ್ರಮ ಸಂಖ್ಯೆ | : | 337 |
| 2. ಶಿಕ್ಷಣ ಸಂಸ್ಥೆಯ ವಿವರ | : | ಸೆಂಟ್ ಮೇರೀಸ್ ಇಂಗ್ಲೀಷ್ [illegible] ಹೈಸ್ಕೂಲ್, ಕಾಲೇಜು ರಸ್ತೆ, ಟಿ.ನರಸೀಪುರ-571124, ಮೈಸೂರು ಜಿಲ್ಲೆ. |
| 3. ಅನುಮತಿ ನೀಡಿದ ತರಗತಿ | : | 8ನೇ ತರಗತಿ |
| 4. ಪ್ರಾರಂಭಿಸಬೇಕಾದ ತರಗತಿಗಳು ಹಾಗೂ ಶೈಕ್ಷಣಿಕ ವರ್ಷ | : | 1999 — 2000 — 8ನೇ ತರಗತಿ<br>2000 — 2001 — 9ನೇ ತರಗತಿ<br>2001— 2002 — 10ನೇ ತರಗತಿ |
| 5. ಅನುಮತಿ ನೀಡಿದ ಮಾಧ್ಯಮ | : | ಆಂಗ್ಲ |
| 6. ಠೇವಣಿ ಪಾವತಿ ಮಾಡಿರುವುದು | : | ರೂ.10,000:- |

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮಸಂಖ್ಯೆ:....337.....ಪುಟ ಸಂಖ್ಯೆ:..337... ವಾಲ್ಯೂಂ ಸಂಖ್ಯೆ:....1.......ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ.

ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತುಗೊಳಪಟ್ಟು ನೀಡಲಾಗಿದೆ :-

(1) ಈ ನೋಂದಾವಣಿಯು ನಿಯಮ 3(5)(4)ಕ್ಕೆ ಒಳಪಟ್ಟಿರುತ್ತದೆ.
(2) ಗವರ್ನಿಂಗ್ ಕೌನ್ಸಿಲ್ ಇವರು ನಿಯಮ 4(4)ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
(3) ಶಾಲಾ ನಿವೇಶನ, ಬಿಲ್ಡಿಂಗ್, ಕಟ್ಟಡ, ಪಾಠ, ಪೀಠೋಪಕರಣಗಳು, ಸಿಬ್ಬಂದಿವರ್ಗ, ಆರ್ಥಿಕ ಅನುಕೂಲತೆಗಳು, ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
(4) ಈ ಶಿಕ್ಷಣ ಸಂಸ್ಥೆಗೆ ಕಾಲೇಜು ರಸ್ತೆ,. ಟಿ.ನರಸೀಪುರ,. ಇಲ್ಲಿ...............ಪ್ರೌಢ ಶಾಲೆಯನ್ನು ನೋಂದಾಯಿಸುವ ವಿಚಾರವನ್ನು ಸರ್ಕಾರಿ ಆದೇಶಸಂಖ್ಯೆ: ಇಡಿ 14 ಎಸ್‌ಇಎಸ್ 99, ದಿನಾಂಕ:17-3-99ರನ್ವಯ ಪರಿಶೀಲಿಸಲಾಗಿದೆ.
ಮೈಸೂರು ಜಿಲ್ಲಾ..... ಉಪನಿರ್ದೇಶಕರ ವರದಿಯ ಅನ್ವಯ ಈ ಸಂಸ್ಥೆಯು ಶಾಲೆಯನ್ನು ತೆರೆಯಲು ಉದ್ದೇಶಿಸಿರುವ ಸ್ಥಳದಲ್ಲಿ 5 ಕಿ.ಮೀ. ವಿಸ್ತೀರ್ಣದೊಳಗಿನ ಪ್ರದೇಶದಲ್ಲಿ.....01...ಸಂಖ್ಯೆಯ ಸರ್ಕಾರಿ ಪ್ರೌಢಶಾಲೆಗಳು ...01...... ಸಂಖ್ಯೆಯ ಅನುದಾನಿತ ಪ್ರೌಢಶಾಲೆಗಳು ...—.....ಸಂಖ್ಯೆಯ ಅನುದಾನ ರಹಿತ ಖಾಸಗಿ ಪ್ರೌಢಶಾಲೆಗಳು ಈಗ ಅಸ್ತಿತ್ವದಲ್ಲಿರುತ್ತವೆ.

ಹಾಗೂ ಈ ಶಾಲೆಗಳು ಸದರಿ ಪ್ರದೇಶದ ಶೈಕ್ಷಣಿಕ ಅಗತ್ಯತೆಯನ್ನು ಪೂರೈಸುತ್ತಿರುವುದನ್ನು ಪರಿಗಣಿಸಲಾಗಿದೆ. ಹಾಗೂ, ಸರ್ವೋಚ್ಛ ನ್ಯಾಯಾಲಯವು ಉನ್ನಿಕೃಷ್ಣನ್ ಪ್ರಕರಣದಲ್ಲಿ 14 ವರ್ಷಗಳ ವಯೋಮಿತಿಯೊಳಗಿನ ಮಕ್ಕಳಿಗೆ ಉಚಿತ ಶಿಕ್ಷಣದ ಸಂವಿಧಾನಾತ್ಮಕ ಹಕ್ಕನ್ನು ನೀಡಿರುವುದು, ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸುವ ರಾಜ್ಯ ಸರ್ಕಾರದ ಪ್ರಯತ್ನಗಳನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಪ್ರೋತ್ಸಾಹಿಸುವುದೆಂದು ಹಾಗೂ ರಾಜ್ಯ ಸರ್ಕಾರವು ನಡೆಸುವ ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸಲು ಇಚ್ಛಿಸದೇ ಇರುವ ಪೋಷಕರ ಮಕ್ಕಳ ಶೈಕ್ಷಣಿಕ ಅಗತ್ಯತೆಯನ್ನು ಇಂತಹ ಖಾಸಗಿ ಸಂಸ್ಥೆಗಳು ಪೂರೈಸುತ್ತವೆ ಎಂಬ ಅಂಶವನ್ನು ಪರಿಗಣಿಸಿದೆ. ಸದರಿ ಸ್ಥಳದಲ್ಲಿ ಮತ್ತೊಂದು ಪ್ರಾಥಮಿಕ ಶಾಲೆಯು ಅವಶ್ಯಕತೆಯಿದ್ದರೂ ಇಲ್ಲದಿದ್ದರೂ ಸರ್ಕಾರಿ ಅಥವಾ ಅನುದಾನಿತ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಇಚ್ಛಿಸದೇ ಇರುವ ಪೋಷಕರ ಮಕ್ಕಳ ಶೈಕ್ಷಣಿಕ ಅಗತ್ಯತೆಯನ್ನು ಪೂರೈಸಲು ಮತ್ತು ಪೋಷಕರಿಗೆ ಮತ್ತು ಮಕ್ಕಳಿಗೆ ಶಿಕ್ಷಣ ಆಯ್ಕೆ ಸ್ವಾತಂತ್ರ್ಯ ನೀಡುವ ಉದ್ದೇಶದಿಂದಲೂ ಹಾಗೂ ಸದರಿ ಶಿಕ್ಷಣ ಸಂಸ್ಥೆಯು ಸ್ವಪ್ರೇರಣೆಯಿಂದ ಸದರಿ ಸ್ಥಳದಲ್ಲಿ ಮತ್ತೊಂದು ಶಾಲೆ ತೆರೆಯಲು ಮುಂದೆ ಬಂದಿರುವುದರಿಂದಲೂ ಶಾಶ್ವತ ಅನುದಾನ ರಹಿತ ಷರತ್ತಿನ ಮೇಲೆ ಸದರಿ ಶಾಲೆಯನ್ನು ನೋಂದಾಯಿಸಲಾಗಿದೆ.

(5) ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.

(6) ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

(7) ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಸ್ತಾಂತರಿಸತಕ್ಕದ್ದಲ್ಲ.

(8) ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸಿದ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983(ಕರ್ನಾಟಕ ಆಕ್ಟ್ ಸಂಖ್ಯೆ:1:95) ಇದರಡಿಯಲ್ಲಿ ಬರುವ ಕಲಂಗಳನ್ನು ಮತ್ತು ಅದರಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.

(9) ಈ ಪ್ರಾಥಮಿಕ ಶಾಲಾ ನೋಂದಾವಣೆಯು ಸರ್ಕಾರಿ ಅಧಿಸೂಚನೆ ಸಂಖ್ಯೆ:ಇಡಿ 170 ಪಿಜಿಸಿ 98, ದಿನಾಂಕ:7—9—98 ಮತ್ತು ದಿನಾಂಕ:29—12—98ರ ಪ್ರಕಾರ ಶಾಶ್ವತ ಅನುದಾನ ರಹಿತವಾಗಿರುತ್ತದೆ. ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ.10-00 ಛಾಪಾ ಕಾಗದದಲ್ಲಿ ನೋಂದಾಯಿತ ವಾಗ್ದಾನ ಪ್ರಮಾಣೀಕರಿಸಿದ ಒಪ್ಪಿಗೆಪತ್ರವನ್ನು ನೀಡುವುದು.

(10) ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ(ಶಿಸ್ತು ಮತ್ತು ನಿಯಂತ್ರಣ)ನಿಯಮ 1975ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

(11) ಇಲಾಖೆ ಹಾಗೂ ಸರ್ಕಾರ ನಿಗದಿಪಡಿಸಿದ ಪಠ್ಯ ಮತ್ತು ಪಠ್ಯ ಪುಸ್ತಕ, ಪರೀಕ್ಷಾ ಕ್ರಮ ಪದ್ಧತಿ ತಪ್ಪದೇ ಅಳವಡಿಸತಕ್ಕದ್ದು.

...ಪುಟ—3ಕ್ಕೆ...

(12) ಶಾಲೆ ಪ್ರಾರಂಭಿಸಿದ ಎರಡು ತಿಂಗಳ ಅವಧಿಯೊಳಗೆ ಪ್ರಥಮ ಮಾನ್ಯತೆಗೆ ಸಂಬಂಧಿಸಿದ ವಿಭಾಗೀಯ ಸಹ ನಿರ್ದೇಶಕರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ನಂತರ ಪ್ರತಿ ಮೂರು ವರ್ಷಗಳಿಗೊಮ್ಮೆ ಮಾನ್ಯತೆಯನ್ನು ತಪ್ಪದೇ ಜಿಲ್ಲಾ ಉಪನಿರ್ದೇಶಕರಿಂದ ನವೀಕರಿಸಿಕೊಳ್ಳತಕ್ಕದ್ದು.

(13) ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಪಾಲಿಸತಕ್ಕದ್ದು.

(14) ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.

(15) ಕರ್ನಾಟಕ ಶಿಕ್ಷಣ ಮಸೂದೆ ಅನುಚ್ಛೇದ 8ರ ಅಡಿಯಲ್ಲಿ ಉಪಬಂಧ 36—39ರಂತೆ ನೋಂದಾಯಿಸಿದ ಎಲ್ಲಾ ಶಾಲೆಗಳು ರೆಕಗ್ನಿಷನ್ ಹಾಗೂ ಪ್ರಾವಿಷನಲ್ ರೆಕಗ್ನಿಷನ್ ವ್ಯಾಪ್ತಿಗೆ ಬರುವುದು.

(16) ಪ್ರತಿ ವರ್ಷವು ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

(17) ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ವಿಭಾಗೀಯ ಸಹನಿರ್ದೇಶಕರು ಹಾಗೂ ಆಡಳಿತ ಮಂಡಳಿಯ ಜಂಟಿ ಖಾತೆಯಲ್ಲಿ ಇರಿಸತಕ್ಕದ್ದು.

(18) ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು, ಆಟದ ಮೈದಾನ, ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ನೋಂದಣಿಯನ್ನು ರದ್ದುಗೊಳಿಸಲಾಗುವುದು.

(19) ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.

(20) ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭದ ಎರಡು ತಿಂಗಳ ಒಳಗಾಗಿ ಈ ಕಛೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತಂತಾನೇ ರದ್ದಾಗುವುದು.

(21) ಕರ್ನಾಟಕ ಶಿಕ್ಷಣ ನಿಯಮ 6ರಡಿಯಲ್ಲಿ ಸಂಸ್ಥೆಯು ಈಗಾಗಲೇ ನಡೆಸುತ್ತಿರುವ ಎಲ್ಲಾ ಶಾಲೆಗಳ ನೋಂದಣಿಯನ್ನು ಮಾಡಿಸತಕ್ಕದ್ದು.

ಸ್ಥಳ :— ಬೆಂಗಳೂರು
ದಿನಾಂಕ :— 11 MAY 1999

ಕಛೇರಿ ಮೊಹರು

ನಿರ್ದೇಶಕರು (ಪ್ರೌಢ ಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ
ಹಾಗೂ ನೋಂದಣಿ ಅಧಿಕಾರಿ.

ಗೆ
1) ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು, ಇವರಿಗೆ, ಮಾಹಿತಿಗಾಗಿ ಸಲ್ಲಿಸಿದೆ;
2) ಸಂಬಂಧಿಸಿದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್;
3) ನಿರ್ದೇಶಕರು, ಕ.ಪ್ರೌ.ಶಿ.ಪ.ಮಂಡಳಿ; ಡಿ.ಎಸ್.ಇ.ಆರ್.ಟಿ : ಪದವಿ ಪೂರ್ವ ಕಾಲೇಜು, ಬೆಂಗಳೂರು;
4) ರಾಜ್ಯದ ಎಲ್ಲಾ ವಿಭಾಗೀಯ ಸಹನಿರ್ದೇಶಕರುಗಳಿಗೆ : ಜಿಲ್ಲಾ ಉಪನಿರ್ದೇಶಕರುಗಳಿಗೆ;
5) ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ : ಆಡಳಿತ ಮಂಡಳಿಯವರಿಗೆ.

St. Mary's Education Trust
Chairman

Principal
ST. MARY'S ENGLISH SCHOOL
T. Narasipura, Mysore-571 124